**ಕರ್ನಾಟಕ ವಿಧಾನ ಪರಿಷತ್ತು**

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1078
2. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ.
3. ಉತ್ತರಿಸಬೇಕಾದ ದಿನಾಂಕ : 22-09-2022.
4. ಉತ್ತರಿಸುವವರು : ಮಾನ್ಯ ಸಣ್ಣ ನೀರಾವರಿ ಹಾಗೂ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು.

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕುದುರು ಹೋಬಳಿ, ಬಿಸ್ಕೂರು ಗ್ರಾಮದಲ್ಲಿರುವ ಸುಮಾರು 150 ಎಕರೆ ವಿಸ್ತೀರ್ಣದಲ್ಲಿರುವ ಕೆರೆ ತುಂಬಿದ್ದು, ಕೆರೆಯ ಏರಿಯಲ್ಲಿ ದೊಡ್ಡ ಪ್ರಮಾಣದ ರಂಧ್ರಗಳಾಗಿರುವುದರಿಂದ ಕೆರೆ ನೀರು ಸುಮಾರು 2 ತಿಂಗಳಿನಿಂದ ಪೋಲಾಗುತ್ತಿದ್ದು ಇದನ್ನು ತಡೆಗಟ್ಟದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು ಕುದುರು ಹೋಬಳಿ, ಬಿಸ್ಕೂರು ಕೆರೆಯಲ್ಲಿ ನೀರು ಜಿನುಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br><br>ಸದರಿ ಕೆರೆ ಅಂಗಳದ ವಿಸ್ತೀರ್ಣ 32.20 ಹೆಕ್ಟೇರ್ ಹಾಗೂ 130.31 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶ ಹೊಂದಿರುವ ಕೆರೆಯ ನೀರು ಸಂಗ್ರಹಣಾ ಸಾಮರ್ಥ್ಯ 48.84 ಎಂ.ಸಿ.ಎಫ್.ಟಿ. ಗಳಾಗಿರುತ್ತದೆ. ಕಳೆದ ಎರಡು ತಿಂಗಳುಗಳಿಂದ ಸುರಿದ ಭಾರಿ ಮಳೆಯಿಂದ ಸದರಿ ಕೆರೆಯ ಕೋಡಿ ಹರಿದಿದ್ದು ಕೆರೆಯ ಏರಿಯಲ್ಲಿ ನೀರು ಜಿನುಗುತ್ತಿರುತ್ತದೆ. ಜಿನುಗುತ್ತಿರುವ ಭಾಗಗಳಲ್ಲಿ ಮಣ್ಣನ್ನು ಹಾಕಿ ಗಟ್ಟಿಗೊಳಿಸಿ ತಾತ್ಕಾಲಿಕವಾಗಿ ಜಿನುಗುವಿಕೆಯನ್ನು ತಡೆಗಟ್ಟಲು ಕ್ರಮ ವಹಿಸಲಾಗುತ್ತಿದೆ. |
| ಆ | ಬಂದಿದ್ದಲ್ಲಿ, ಕರ್ತವ್ಯ ನಿರ್ಲಕ್ಷಿತ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು/ ಹೆಸರು, ಹುದ್ದೆ ಸಹಿತ ವಿವರ ನೀಡುವುದು) | ಯಾವುದು ಇರುವುದಿಲ್ಲ. |

**ಸಂಖ್ಯೆ:ಎಂಐಡಿ 128 ಎಲ್‌ಸಿಕ್ಯೂ 2022**

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.